

ನೆಲವೋ ಮುಗಿಲೋ.... ಮುಳ್ಳಯ್ಯನಗಿರಿಯ ಬೆಳಗು ಹೀಗಿರುವುದು...

ಯಾವ್ಯಾವ ಜಾಗ ಎಷ್ಟೆಷ್ಟು ದೂರ..

ಚಿಕ್ಕಮಗಳೂರಿನಿಂದ

ಮುಳ್ಳಯ್ಯನಗಿರಿ 18 ಕಿ.ಮೀ.
ಬಾಬಾಬುಡನ್ಗಿರಿ 35 ಕಿ.ಮೀ,
ಕೆಮ್ಮಣ್ಣಗುಂಡಿ 45 ಕಿ.ಮೀ.
ಭದ್ರಾ ಅಭಯಾರಣ್ಯ 40 ಕಿ.ಮಿ.

ಸಂಪರ್ಕಕ್ಕಾಗಿ:

ಚಿಕ್ಕಮಗಳೂರು ಪ್ರವಾಸೋದ್ಯಮ ಕಚೇರಿ ಸಂಖ್ಯೆ:08262228493
ಕೆಮ್ಮಣ್ಣಗುಂಡಿ ಸಂಪರ್ಕ ಸಂಖ್ಯೆ: 08261 237126,237134.

ಬಂದು ಅಯ್ಯನಕೆರೆಗೆ ಹೋಗಲೂ ಅವಕಾಶವಿದೆ. ಧಾರ್ಮಿಕ ಕ್ಷೇತ್ರಗಳತ್ತ ಒಲವು ಇರುವವರು ಚಿಕ್ಕ ಮಗಳೂರು – ಬಾಳೆಹೊನ್ನೂರು – ಹೊರನಾಡು – ಶೃಂಗೇರಿಗೆ ಒಂದು ದಿನದಲ್ಲಿ ಹೋಗಿ ಬರಲು ಸಾಧ್ಯವಿದೆ. ಕಳಸ–ಹೊರನಾಡು ಮಾರ್ಗ ಮಧ್ಯೆ ಭದ್ರಾನದಿ ತಟದ ಅಂಬಾತೀರ್ಥ ರಮ್ಯತಾಣ. ಹೊರನಾಡು–ಶೃಂಗೇರಿಗಳಲ್ಲಿ ದೇವಾಲಯಗಳ ಜೊತೆ ಸಾಕಷ್ಟು ಖಾಸಗಿ ವಸತಿಗೃಹಗಳೂ ಇವೆ. ಶೃಂಗೇರಿಗೆ ಚಿಕ್ಕಮಗಳೂರು, ಬೆಂಗಳೂರು, ಮೈಸೂರಿನಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಾಕಷ್ಟು ಬಸ್ಸುಗಳು ಇವೆ. ಶೃಂಗೇರಿ ಹೋದವರು ಸಿರಿಮನೆ ಜಲಪಾತ, ಅಥವಾ ಮಾರ್ಗವಾಗಿ ಸಾಗಿ ಕುಂದಾದ್ರಿ ವೀಕ್ಷಿಸಬಹುದು.

ಶಿವಮೊಗ್ಗ ಕಡೆಯಿಂದ ಚಿಕ್ಕಮಗಳೂರಿನತ್ತ ಬರುವವರು ಲಕ್ಕವಳ್ಳಿ ಜಲಾಶಯ, ಲಕ್ಕವಳ್ಳಿ ಅಭಯಾರಣ್ಯ, ಅಮೃತಾಪುರದ ಹೊಯ್ಸಳ ದೇಗುಲ, ಕಲ್ಲತ್ತಗಿರಿ, ಕೆಮ್ಮಣ್ಣುಗುಂಡಿ (ಇಲ್ಲಿ ಉಳಿಯಲೂ ಅವಕಾಶವಿದೆ ) ನೋಡಿಕೊಂಡು ಬರುವುದು ಸೂಕ್ತ. ಕೆಮ್ಮಣ್ಣುಗುಂಡಿಯಿಂದ 6 ಕಿ.ಮೀ. ದೂರದಲ್ಲಿ ಹೆಬ್ಬೆ ಜಲಪಾತವಿದ್ದು ಖಾಸಗಿ ಜೀಪ್‌ಗಳಲ್ಲಿ ಹೋಗಬೇಕು. ಪ್ರಯಾಣ ಸ್ವಲ್ಪ ದುಬಾರಿ.

ನಿಸರ್ಗ ಪ್ರವಾಸೋದ್ಯಮದಲ್ಲಿ ಆಸಕ್ತಿ ಇರುವವರು ಮೂಡಿಗೆರೆ ಸನಿಹದ ಶಿಶಿಲ ಕುಡಿ, ಸುಂಕಸಾಲೆ (ಕೊಟ್ಟಿಗೆಹಾರ–ಕಳಸ ಮಾರ್ಗ) ಬಳಿಯ ಬಲ್ಲಾಳರಾಯನ ದುರ್ಗ, ಜಯಪುರ (ಬಸರಿಕಟ್ಟೆ) ಹತ್ತಿರದ ಮೇರ್ತಿಖಾನ್ ಗುಡ್ಡಗಳಿಗೆ ಚಾರಣ ಮಾಡಬಹುದು.

## ಪ್ರಯಾಣ ಹೇಗೆ?

ಚಿಕ್ಕಮಗಳೂರಿಗೆ ಬೆಂಗಳೂರು, ಮೈಸೂರು, ಶಿವಮೊಗ್ಗದಿಂದ ಸಾಕಷ್ಟು ಬಸ್ಸುಗಳಿವೆ. ಹುಬ್ಬಳ್ಳಿ–ಬೆಂಗಳೂರಿನಿಂದ ಕಡೂರು–ಬೀರೂರಿಗೆ ರೈಲ್ವೆ ಸಂಪರ್ಕವೂ ಇದೆ.

ಚಿಕ್ಕಮಗಳೂರಿನಿಂದ ಮುಳ್ಳಯ್ಯನಗಿರಿ–ಬಾಬಾ ಬುಡನ್‌ಗಿರಿ ಇನ್ನಿತರೆ ಸ್ಥಳಗಳಿಗೆ ಕೆಲ ವಸತಿ ಗೃಹದವರು ವಾಹನಗಳ ಮೂಲಕ ಕರೆದೊಯ್ಯುವ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. (ಸಂಪರ್ಕ ಸಂಖ್ಯೆ: ಮಿಥುನ್ – 8277446111 / 08262238111) ಸ್ವಂತ ವಾಹನದಲ್ಲಿಯೇ ಬರುವಿರಾದರೆ ಇನ್ನೂ ಒಳ್ಳೆಯದು.

ಈ ಎರಡೂ ಸ್ಥಳಗಳಿಗೆ ಶನಿವಾರ, ಭಾನುವಾರಗಳಂದು ಹೋಗಿ ಬರುವುದು ಸ್ವಲ್ಪ ತ್ರಾಸ. ಪ್ರವಾಸಿಗರ ದಟ್ಟಣೆ ಅಧಿಕ. ಟ್ರಾಫಿಕ್ ಜಾಮ್ ಕಿರಿಕಿರಿಯೂ ಎದುರಾಗಬಹುದು. ಮುಳ್ಳಯ್ಯನಗಿರಿಗೆ ಈ ದಿನಗಳಲ್ಲಿ ಬೆಳಿಗ್ಗೆ 9ರ ಬಳಿಕ ಸೀತಾಳಯ್ಯನಗಿರಿ ಬಳಿ ವಾಹನ ನಿಲ್ಲಿಸಿ ಹೋಗಬೇಕು. (ಅಲ್ಲಿಂದ ಜೀಪ್ ವ್ಯವಸ್ಥೆ ಇದೆ) ಬೆಳಿಗ್ಗೆ 9ರ ಒಳಗೇ ಹೋಗಿಬರುವುದು ಉತ್ತಮ.

ಬಾಬಾಬುಡನ್ ಗಿರಿಗೆ ಹೊದಿಸಿದ ಹಸಿರ ವಸ್ತ್ರವನ್ನು ಮುಗಿಲುಗಳೂ ಇಣುಕಿನೋಡುತ್ತಿವೆ.

